ದಿನಾಂಕ **17.08.2021**
ಅಸಲು ದಾವೆಃ **59/2019**
ಪಿ.ಡಬ್ಲ್ಯೂ: 1

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿ ಅವರ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿ ಅದರಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆಂದು ತಿಳಿಸಿರುತ್ತಾರೆ.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಎಮ್.ಕೆ.ಜೆ. ವಕೀಲರಿಂದ**

1 ನೇ ಪ್ರತಿವಾದಿಯವರ ಗಂಡ ನನಗೆ ಡಿಪಿ ನೋಟ್ ಮತ್ತು ಹಣ ಸಂದ ರಶೀದಿ ಬರೆದು ಕೊಟ್ಟಿದ್ದು ಅದನ್ನು ಹಾಜರು ಮಾಡಿದ್ದು ಅವರು ಎರಡು ಕಡೆ ಸಹಿ ಮಾಡಿದ್ದು ಅದನ್ನು ನಾನು ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ 1, ಪ್ರತಿವಾದಿ ಗಂಡನ ಸಹಿಯನ್ನು ನಿಪಿ 1 ಎ ಮತ್ತು 1 ಬಿ, ಅಲೋಕ್ ಮತ್ತು ಸಿ.ಶಿವಣ್ಣ ಎರಡು ಕಡೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಅವರ ಸಹಿಗಳನ್ನು ಗುರುತಿಸಿದ್ದು ನಿಪಿ 1 ಸಿ, ನಿಪಿ 1 ಡಿ, 1 ಇ, 1 ಎಫ್ ಎಂದು ಗುರುತಿಸಲಾಯಿತು. ಪ್ರತಿವಾದಿಗಳಿಗೆ ವಕೀಲರ ಮೂಲಕ ನೋಟೀಸ್ ಕಳುಹಿಸಿದ್ದು ಕಛೇರಿ ನಕಲನ್ನು ನಿಪಿ 2, ಅಂಚೆ ರಶೀದಿಯನ್ನು ನಿಪಿ 3, ಸ್ವೀಕೃತಿ ಪತ್ರವನ್ನು ನಿಪಿ 4, ಪ್ರತ್ಯುತ್ತರ ನೋಟೀಸ್ ಅನ್ನು ನಿಪಿ 5 ಎಂದು ಗುರುತಿಸಲಾಯಿತು. ಆಸ್ತಿ ತೆರಿಗೆ ದಾಖಲೆಯ ದೃಢೀಕೃತ ನಕಲನ್ನು ಹಾಜರು ಮಾಡಿದುದ ನಿಪಿ 6 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಕೋರಿಕೆ ಮೇರೆಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

**ಓ. ಹೇ.ಕೇ. ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮದ್ದೂರು.**